ದಿನಾಂಕ : 21.12.2024 ರಂದು ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ** 3 ನೇ ಎದುರುದಾರರ ಪರ **ಶ್ರೀ** ವಿ.ವೈ. **ವಕೀಲರಿಂದ,**

ನನ್ನ ವಯಸ್ಸು 28 ವರ್ಷ ಇರುತ್ತದೆ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುತ್ತದೆ. ದಿನಾಂಕಃ 07.07.2022 ರಂದು ರಾತ್ರಿ 9.30 ಗಂಟೆಗೆ ಅಪಘಾತ ಆಗಿರುತ್ತದೆ. ಇಲ್ಲಿಂದ ಹುಲಿಗೆಮ್ಮ ದೇವಸ್ಥಾನಕ್ಕೆ ಹೋಗುತ್ತಿರುವಾಗ ಅಪಘಾತ ಆಗಿರುತ್ತದೆ. ಇಲ್ಲಿಂದ 7 ಗಂಟೆಗೆ ಬಿಟ್ಟಿರುತ್ತೇವೆ. ಇಲ್ಲಿಂದ ಹುಲಿಗೆಮ್ಮ ದೇವಸ್ಥಾನ 70 ಕಿ.ಮೀ ಅಂತರದಲ್ಲಿ ಇರುತ್ತದೆ. ನಾನು ಮತ್ತು ಗೋಪಾಲ್ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೇವು . ಗಾಡಿ ಗೋಪಾಲ್ ಚಲಾಯಿಸುತ್ತಿದ್ದ. ಅವರ ಹತ್ತಿರ ಚಾಲನೆ ಪರವಾನಿಗೆ ಪತ್ರ ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಆದರೆ ವಿಮೆ ಇರುತ್ತದೆ. ಸಾಮಾನ್ಯವಾಗಿ ತಿರುವು ಇದ್ದಾಗ ಮತ್ತು ಹಂಪ್ಸ್ ಇದ್ದಾಗ ಗಾಡಿಗಳು ನಿಧಾನವಾಗಿ ಚಲಾಯಿಸುತ್ತವೆ ಎಂದರೆ ಸರಿ. ಹಂಪ್ಸ್ ಇದ್ದಾಗ ಎದುರು ಗಾಡಿಗಳು ನಿಧಾನವಾಗಿ ಬರುತ್ತವೆ ಎಂದರೆ ಸರಿ. ನಾವು ನಿಧಾನವಾಗಿ ಹೋಗುತ್ತಿದ್ದೇವು ಕಾರ್ ಎದುರುಗಡೆಯಿಂದ ಸ್ಪಿಡ್ ಆಗಿ ಬಂದಿರುತ್ತದೆ. ತಿರುವು ಮತ್ತು ಹಂಪ್ಸ್ ಇದ್ದಾಗ ನಮ್ಮ ಗಾಡಿಯು ಮತ್ತು ಎದುರುಗಡೆಯಿಂದ ಬರುವ ಗಾಡಿಯು ನಿಧಾನವಾಗಿ ಬರುತ್ತವೆ ಎಂದರೆ ಸರಿ. ಅರ್ಜಿಯಲ್ಲಿ ಹೀಗೆ ಪರಿಸ್ಥಿತಿ ಆಗಿದೆ ಎಂದು ತೋರಿಸಿಕೊಂಡಿರುತ್ತೇನೆ ಮತ್ತು ಖರ್ಚು ಮಾಡಿರುತ್ತೇನೆ ಎಂದು ಬರೆದಿರುತ್ತೇನೆ. ನಿಮ್ಮ ಅರ್ಜಿಯಲ್ಲಿ ಅಪಘಾತವು ಬೆಳಿಗ್ಗೆ 9.30 ಸಮಯಕ್ಕೆ ಆಗಿರುತ್ತದೆ ಎಂದು ಬರೆದಿರುತ್ತೀರಿ ಅದು ತಪ್ಪಾ ಅಂದರೆ ಸಾಕ್ಷಿಯು ಇಲ್ಲಾ ರಾತ್ರಿ 9.30 ಗಂಟೆಗೆ  ಆಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಅರ್ಜಿಯಲ್ಲಿ ಬೆಳಿಗ್ಗೆ 9.30

ಗಂಟೆಗೆ ಅಪಘಾತ ಆಗಿದೆ ಎಂದು ಬರೆದಿರುವ ವಿಷಯ ಸುಳ್ಳು ಇರುತ್ತದೆ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಅರ್ಜಿ ಪ್ರಕಾರ 9.30 ಬೆಳಿಗ್ಗೆ ಅಪಘಾತ ಆಗಿರುವುದು ಸುಳ್ಳು ಇರುತ್ತದೆ ಅದು ರಾತ್ರಿ 9.30 ಗಂಟೆಗೆ ಆಗಿರುತ್ತದೆ ಎಂದರೆ ಸರಿ.

2. ಅಪಘಾತ ಆದ ಮರು ದಿನ ಎಂದರೆ 8 ನೇ ತಾರೀಖುನಂದು ಗೋಪಾಲ್ ರವರ ಹೆಂಡತಿ ದೂರನ್ನು ಕೊಟ್ಟಿದ್ದರು. ದೂರು ಕೊಟ್ಟಿದ್ದ ದಿನ ಕೇಸ್ ರೆಜಿಸ್ಟರ್ ಆಗಿರುತ್ತದೆ ಎಂದರೆ ಸರಿ. ನಾನು ದೂರು ಕೊಟ್ಟಿಲ್ಲ. ರಾತ್ರಿ ನಾನು ಮತ್ತು ಗೋಪಾಲ್ ಕುಡಿದುಕೊಂಡು ಗಾಡಿಯನ್ನು ಚಲಾಯಿಸುವುದರಿಂದ ನಮ್ಮ ನಿರ್ಲಕ್ಷ್ಯತನದಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ನಿರ್ಲಕ್ಷ್ಯತನದಿಂದ ಅಪಘಾತ ಆಗಿರುತ್ತದೆ ಎದುರುಗಾಡಿಯಿಂದ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ.

3. ನಾನು ಗಾರೇ ಕೆಲಸ ಮಾಡುತ್ತಿದ್ದೇನೆ. ನಾನು ಗಾರೇ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಕಿಲ್ಲ. ದೂರಿನಲ್ಲಿ ನಾನು ಮತ್ತು ಗೋಪಾಲ್ ಗಾರೇ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ಹೇಳಿದ್ದೇವು ಎಂದು ನುಡಿಯುತ್ತಾರೆ. ನಮ್ಮ ಗಾಡಿ ನಂಬರ್. ಕೆಎ-34-5180 ಇರುತ್ತದೆ. ನನಗೆ ಯಾವುದೇ ಗಾಯ ಆಗಿರುವುದಿಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತ ಆದ ನಂತರ ಮಲ್ಲಿಕಾರ್ಜುನ

ಆಸ್ಪತ್ರೆ ಗಂಗಾವತಿಯಲ್ಲಿ ತೋರಿಸಿಕೊಂಡಿರುತ್ತೇನೆ. ಅಲ್ಲಿ ಒಂದು ವಾರ ಅಡ್ಮಿಟ್ ಆಗಿರುತ್ತೇನೆ. ಮಲ್ಲಿಕಾರ್ಜುನ ಆಸ್ಪತ್ರೆಯಲ್ಲಿ 3-4 ಸಲ ತೋರಿಸಿಕೊಂಡಿರುತ್ತೇನೆ. ನ್ಯೂನ್ಯತೆ ಪ್ರಮಾಣ ಪತ್ರ ಮಲ್ಲಿಕಾರ್ಜುನ ಆಸ್ಪತ್ರೆರವರು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ . ವೈದ್ಯರಾದ ಶ್ರೀನಿವಾಸ್ ರವರು ಅಪಘಾತ ಆದ ನಂತರ ನನಗೆ ಚಿಕಿತ್ಸೆ ಕೊಟ್ಟಿರುವುದಿಲ್ಲ. ನ್ಯೂನ್ಯತೆ ಪ್ರಮಾಣ ಪತ್ರ ಮಲ್ಲಿಕಾರ್ಜುನ ಆಸ್ಪತ್ರೆಯಿಂದ ತೆಗೆದುಕೊಂಡು ಬರುವುದು ಬದಲು ಶ್ರೀನಿವಾಸ್ ವೈದ್ಯರಿಂದ ಪಡೆದಿರುತ್ತೇನೆ ಅದು ಸೃಷ್ಟಿ ಮಾಡಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ವೈದ್ಯಕೀಯ ಬಿಲ್ಲುಗಳು ನಾನು ನ್ಯಾಯಾಲಯಕ್ಕೆ ಸೃಷ್ಟಿ ಮಾಡಿ ಹಾಕಿರುತ್ತೇನೆ ಅಂತಹ ಗಾಯಗಳು ನನಗೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸಲಹಾ ಚೀಟಿಗಳು ನಾನು ಸೃಷ್ಟಿ ಮಾಡಿ ಹಾಕಿರುತ್ತೇನೆ ಅದರಲ್ಲಿ ಆಸ್ಪತ್ರೆಯ ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದ ಮುಂಚೆ ಹೇಗೆ ಕೆಲಸ ಮಾಡುತ್ತಿದ್ದೆ ಈಗಲೂ ಸಹ ಆ ರೀತಿಯಲ್ಲಿಯೇ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯೂನ್ಯತೆ ಪ್ರಮಾಣ ಪತ್ರದಲ್ಲಿ ತೋರಿಸಿದಂತಹ 30 ಶೇಕಡಾ ನ್ಯೂನ್ಯತೆ ನನಗೆ ಇರುವುದಿಲ್ಲ ನಾನು ಸೃಷ್ಟಿ ಮಾಡಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ದಿನಕ್ಕೆ 1,000/- ರೂಪಾಯಿ ದುಡಿಯುತ್ತಿದ್ದೆ ಎಂದು ಸುಳ್ಳು ಬರೆದಿರುತ್ತೇನೆ 300-400 ಗಿಂತ ಜಾಸ್ತಿ ದುಡಿಯುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ನಿರ್ಲಕ್ಷ್ಯತದಿಂದ ಅಪಘಾತ ಆಗಿರುವುದರಿಂದ ನಾನು ಪರಿಹಾರ ಪಡೆಯಲು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಹಾಕಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ,**

( ನನ್ನ ಹೇಳಿಕೆಯಂತೆ ಮುಕ್ತನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ,

ಸೀನಿಯರ್ ಸಿವಿಲ್ ನ್ಯಾಯಾಧೀಶರು, ಸಿರುಗುಪ್ಪ.